ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ –2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)
ಸೋಮವಾರ, ದಿನಾಂಕ:08ನೇ ಜೂನ್, 2026

ಸಂಖ್ಯೆ: 16

ಕರ್ನಾಟಕ ಲೋಕಾಯುಕ್ತ ಕಾಯಿದೆ 1985ರ ನಿಯಮ 7ನ್ನು ತಿದ್ದುಪಡಿ ಮಾಡಿ "ಸೆಕ್ಷನ್ 22ರ ಅಡಿಯಲ್ಲಿ ಆಸ್ತಿ ಮತ್ತು ದಾಯಿತ್ವಗಳ ಹೇಳಿಕೆಯನ್ನು ನಮೂನೆ–IVರಲ್ಲಿ ಕರ್ನಾಟಕ ಲೋಕಾಯುಕ್ತ ಜಾಲತಾಣದ ಮೂಲಕ ಸಲ್ಲಿಸಲು ದಿನಾಂಕ:03.06.2026 ರಿಂದ 05.06.2026ರವರೆಗೆ ಎನ್.ಐ.ಸಿ.(ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ)ರವರು ಪ್ರಾತ್ಯಕ್ಷತೆಯನ್ನು ಹಮ್ಮಿಕೊಂಡಿದ್ದರು.

ಆದರೆ, ಮಾನ್ಯ ಮುಖ್ಯಮಂತ್ರಿಯವರ ಪ್ರಮಾಣವಚನ ಕಾರ್ಯಕ್ರಮದ ಅಂಗವಾಗಿ ದಿನಾಂಕ:03.06.2026ರಂದು ವಿಧಾನಸೌಧ, ವಿಕಾಸಸೌಧದ ಅಧಿಕಾರಿ/ನೌಕರರಿಗೆ ಅಪರಾಹ್ನ ರಜೆ ಘೋಷಣೆಯಾದ ಹಿನ್ನೆಲೆಯಲ್ಲಿ ದಿನಾಂಕ:03.06.2026ರಂದು ನಡೆಯ ಬೇಕಿದ್ದ ಪ್ರಾತ್ಯಕ್ಷತೆಯನ್ನು ಮುಂದೂಡಲಾಗಿತ್ತು, ಎನ್.ಐ.ಸಿ.ರವರು ದಿನಾಂಕ:03.06.2026ರಂದು ನಡೆಯಬೇಕಾದ ಪ್ರಾತ್ಯಕ್ಷತೆಯನ್ನು ದಿನಾಂಕ:10.06.2026ರಂದು ಹಮ್ಮಿಕೊಂಡಿರುತ್ತಾರೆ.

ಆದುದರಿಂದ, ದಿನಾಂಕ:04.06.2026 ಮತ್ತು 05.06.2026ರಂದು ಪ್ರಾತ್ಯಕ್ಷತೆಗೆ ಭಾಗವಹಿಸಲು ಸಾಧ್ಯವಾಗದ ಮಾನ್ಯ ಸದಸ್ಯರು ಹಾಗೂ ಅವರ ಆಪ್ತ ಸಹಾಯಕರುಗಳು ದಿನಾಂಕ:10.06.2026ರಂದು ವಿಕಾಸ ಸೌಧದಲ್ಲಿರುವ 4ನೇ ಮಹಡಿಯ ಕೊಠಡಿ ಸಂಖ್ಯೆ:419ರಲ್ಲಿ ಅಪರಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ಭಾಗವಹಿಸುವಂತೆ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರು ಕೋರಿದ್ದು, ಈ ಕಾರ್ಯಗಾರದ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಗಿದೆ.

ಕಾರ್ಯದರ್ಶಿ(ಪ್ರ)

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ.